ಆ) ಸ್ವಾಧೀನಪಡಿಸಿಕೊಂಡಿರುವ ಜಮೀನಿನಲ್ಲಿ ಒಟ್ಟು 262 ಮನೆಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ.

ಆಶ್ರಯ ಮನೆಗಳನ್ನು ನಿರ್ಮಿಸಲು ಇದುವರೆಗೂ ರೂ. 59.55 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಹೌದು. ಮೂಲಭೂತ ಸೌಲಭ್ಯಗಳ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ) ಉದ್ಭವಿಸುವುದಿಲ್ಲ.

ಉ) ಶಿವಪುರ ಬಡಾವಣೆಗೆ ಮೂಲಭೂತ ಸೌಕರ್ಯ ಕಲ್ಪಿಸಲು ವಿವಿಧ ಕಾಮಗಾರಿಗಳ ಅಂದಾಜು ಪಟ್ಟಿಗೆ ರೂ. 54.40 ಲಕ್ಷಗಳಿಗೆ ಅನುಮೋದನೆ ದೊರೆತಿದ್ದು, ಇದುವರೆಗೂ ರೂ. 36.63 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ವಿವರಗಳು ಈ ಕೆಳಗಿನಂತಿದೆ.

ರೂ. ಲಕ್ಷಗಳಲ್ಲಿ

ಅಂದಾಜು ಪಟ್ಟಿಯ ಅನುಮೋದಿತ ಮೊತ್ತ						ಬಿಡುಗಡೆ ಮಾಡಲಾದ ಮೊತ್ತ
ನೀರು ಸರಬರಾಜು	ವಿದ್ಯುತ್‌ಚ್ಛಕ್ತಿ	ರಸ್ತೆ	ಕಲ್ವರ್ಟ್	ಚರಂಡಿ	ಒಟ್ಟು	
5.25	9.59	8.60	2.77	28.19	54.40	36.63

ರಾಜ್ಯದಲ್ಲಿನ ಐ.ಎ.ಎಸ್., ಐ.ಪಿ.ಎಸ್. ಮತ್ತು ಕೆ.ಎ.ಎಸ್. ಅಧಿಕಾರಿಗಳ ವಿವರ ಒದಗಿಸುವುದು

126 (381) ಶ್ರೀ ಯು.ಟಿ. ಖಾದರ್ (ಮಂಗಳೂರು): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಐ.ಎ.ಎಸ್., ಮತ್ತು ಐ.ಪಿ.ಎಸ್. ವೃಂದದ ಅಧಿಕಾರಿಗಳ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು)

ಆ) ಕರ್ನಾಟಕ ಆಡಳಿತ ಸೇವೆ (ಕೆ.ಎ.ಎಸ್.)ಯ ಅಧಿಕಾರಿಗಳಿಗೆ ಮುಂಬಡ್ತಿ ನೀಡುವ ಮೂಲಕ ಈ ಹುದ್ದೆಗಳನ್ನು ಎಷ್ಟು ಪ್ರಮಾಣದಲ್ಲಿ ತುಂಬಲಾಗುತ್ತಿದೆ.;

ಇ) ಕಳೆದ 3 ವರ್ಷಗಳಿಂದ ಎಷ್ಟು ಅಧಿಕಾರಿಗಳನ್ನು ಮುಂಬಡ್ತಿ ಮೂಲಕ ಈ ಹುದ್ದೆಗೆ ಭರ್ತಿ ಮಾಡಲಾಗಿದೆ ; (ವಿವರ ಒದಗಿಸುವುದು)?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):

ಅ) ಐ.ಎ.ಎಸ್. – 218

ಐ.ಪಿ.ಎಸ್. – 139

ಆ) ಭಾರತೀಯ ಆಡಳಿತ ಸೇವೆ (ನೇಮಕಾತಿ ನಿಯಮಗಳು) ನಿಯಮಗಳು 1954ರ ನಿಯಮ 9(1)ರ ಅನ್ವಯ ಒಟ್ಟು ಮಂಜೂರಾದ ಐ.ಎ.ಎಸ್. ಹುದ್ದೆಗಳ ಶೇಕಡ 33 $^{1}/_{3}$ ಮೀರದಷ್ಟು ಹುದ್ದೆಗಳನ್ನು ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳಿಂದ ಐ.ಎ.ಎಸ್.ಗೆ ಮುಂಬಡ್ತಿ ನೀಡಿ ತುಂಬಬಹುದಾಗಿದೆ.

ಇ) 2007ನೇ ಸಾಲಿನಲ್ಲಿ ಉದ್ಭವಿಸಿದ ಐ.ಎ.ಎಸ್. ಮುಂಬಡ್ತಿಯ ರಿಕ್ತ ಸ್ಥಾನಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ 19.3.2009ರ ಅಧಿಸೂಚನೆಯಲ್ಲಿ ಈ ಕೆಳಕಂಡ ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳನ್ನು ಐ.ಎ.ಎಸ್.ಗೆ ಮುಂಬಡ್ತಿ ಮೂಲಕ ನೇಮಿಸಲಾಗಿದೆ.

(1) ಆರ್. ಶಾಂತರಾಜು (2) ಎಸ್.ಎಸ್. ಪಟ್ಟಣಶೆಟ್ಟಿ (3) ಎಸ್. ಶಂಕರನಾರಾಯಣ (4) ಬಿ.ಎನ್. ಕೃಷ್ಣಯ್ಯ. ನಂತರದಲ್ಲಿ ನ್ಯಾಯಾಲಯದ ಆದೇಶದ ಅನ್ವಯ ಶ್ರೀ ಎ.ಎಂ. ಕುಂಜಪ್ಪರವರನ್ನು ದಿನಾಂಕ 11.8.2010ರ ಅಧಿಸೂಚನೆಯಲ್ಲಿ ಐ.ಎ.ಎಸ್.ಗೆ ಮುಂಬಡ್ತಿ ನೀಡಿ ನೇಮಿಸಲಾಗಿದೆ.

2008 ಮತ್ತು 2009ನೇ ಸಾಲಿನಲ್ಲಿ ಉದ್ಭವಿಸಿರುವ ಮುಂಬಡ್ತಿಗೆ ಮೀಸಲಾದ ಐ.ಎ.ಎಸ್. ರಿಕ್ತ ಸ್ಥಾನಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿದೆ. 2010ನೇ ಸಾಲಿನಲ್ಲಿ ಉದ್ಭವಿಸಿದ ರಿಕ್ತ ಸ್ಥಾನಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುತ್ತಿದೆ.

ಉಳ್ಳಾಲ ಪುರಸಭೆಯಲ್ಲಿ ಎ.ಡಿ.ಬಿ. ಕುಡಿಯುವ ನೀರಿನ ಯೋಜನೆ

127 (382) ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳಾಲ ಪುರಸಭೆ ವ್ಯಾಪ್ತಿಯಲ್ಲಿ ಎ.ಡಿ.ಬಿ. ಯೋಜನೆಯಡಿ ಕೈಗೊಂಡಿರುವ ಕುಡಿಯುವ ನೀರಿನ ಯೋಜನೆಯು ಯಾವ ಹಂತದಲ್ಲಿದೆ;